ಒಮ್ಮೊಮ್ಮೆ ... ನಿನ್ನೆದುರು ನಿಂತಾಗ ಬಟಾ ಬಯಲಾದ ಅನುಭವ. ಅಲ್ಲಿ ಸೋಗಿಲ್ಲ, ಕೃತ್ರಿಮತೆಯ ಲವಲೇಶವೂ ಇಲ್ಲ, ಮುಗ್ಧತೆಯೇ ಸಾಕಾರಗೊಂಡಂತೆ..... ಇನ್ನೊಂದೊಮ್ಮೆ ನಿನ್ನ ಕಂಡಾಗ ದಟ್ಟಡವಿಯಲ್ಲಿ ಅಡ್ಡಾಡುವ ಮೃಗರಾಜನ ಹಾಗೆ, ಒಂಟಿ ಸಲಗದ ಹಾಗೆ, ಯಾರ ಹಂಗೂ ಇಲ್ಲದ, ಯಾರನ್ನೂ ಒಲೈಸದ, ಯಾರನ್ನೂ ಲೆಕ್ಕಿಸದ..

ದೊಡ್ಡ ದೊಡ್ಡ ಘನ ವಿದ್ವಾಂಸರು ನಿನ್ನೆದುರು ನಿರುತ್ತರರಾದುದನ್ನು ಕಂಡಿದ್ದೇನೆ. ಖ್ಯಾತ ವಿಜ್ಞಾನಿಗಳು ವೈದ್ಯರು, ಮನ: ಶಾಸ್ತ್ರಜ್ಞಾರು ನಿನ್ನನ್ನರಿಯದೆ ಅಚ್ಚರಿ ಪಟ್ಟದ್ದನ್ನು ನೋಡಿದ್ದೇನೆ.. ಅನಾಮಿಕ ಅಪರಿಚಿತ ನಿನ್ನೆದುರು ಧನ್ಯತೆಯನ್ನು ಅನುಭವಿಸುದನ್ನು ಗಮನಿಸಿದ್ದೇನೆ.. ಮಾತು ಮೂಕವಾದ ಕ್ಷಣವನ್ನು ಅನುಭವಿಸಿದ್ದೇನೆ..

ಛೆ! ಯಾರಯ್ಯ ನೀನು. . ? ‘ಹಿಂದೋಳದ’ ಮಧುರ ಲಾಸ್ಯವೋ? ‘ಶಂಕರಾಭರಣದ ಹರುಷದ ಹೊನಲೋ? ‘ರೇವತಿ’ ಯ ಕರುಣೆಯ ಸೆಲೆಯೋ? ‘ಸಾಮದ’’ ಶಾಂತ ಸ್ವರೂಪವೋ? ಸಪ್ತ ಸ್ವರಗಳಿಗೆ ಆಧಾರವಾದವನು. . ಕೊಳಲ ಹಿಂದಿನ ತುಟಿಯಾದವನು. . ನೀನೇ ಏನು?

ಒಂದಂತೂ ಸತ್ಯ, ನೀನು ಅಹು ದೊಡ್ಡ ಖಿಲಾಡಿ! ಅಂಗಣ, ಪಾತ್ರಗಳನ್ನು ಕ್ಷಣದೊಳಗೆ ಬದಲಾಯಿಸಬಲ್ಲವನು. ಯಾವುದೂ ಇಲ್ಲ ಎಂದಾದಾಗ ಎಲ್ಲವನ್ನೂ ಎದುರಿಗೆ ಸುರಿಸಿ ಮಂಕು ಮೂಡಿಸುವವನು. ‘‘ಬೇಗ ಬೇಗ ಬರ್ಲಿಕ್ಕೆ ಆಗುದಿಲ್ಲಾ’’ ಎಂದು ಹೇಳಿ ಗುಟ್ಟಿನಲ್ಲಿ ‘‘ಬೇಗನೇ ಬಾರೋ, ನಲಿ ನಲಿದು ಬಾರೋ ಒಲಿ ಒಲಿದು ಬಾರೋ ಅಲ್ಲಾ?’’ಎಂದವನು! ‘‘ನೋಡಾ ಒಂದು ಬರ್ಲಿ . . ಆಡಿಸದಳೆಶೋದೆ’’ ಎಂದು ಅದಕ್ಕಾಗಿಯೇ ಚಾತಕ ಪಕ್ಷಿಯಂತೆ ಕುಳಿತ ನನಗೆ ಧನ್ಯತೆಯ ಕ್ಷಣಗಳನ್ನು ಧಾರೆ ಎರೆದವನು... ನಿನ್ನ ಪ್ರತಿ ಉಸಿರ ಹಿಂದೆ ಉಸಿರಾಗಿರುವೆ ಎಂಬ ಭರವಸೆಯನ್ನೆಂದೂ ಹುಸಿ ಮಾಡದವನು.. ನನ್ನ ನುಡಿಗಳಿಗೆ ಹಾಡಾದವನು, ನನ್ನ ಕೊರಳೊಳು ದನಿಯಾದವನು.. ಓ ಕರುಣಾಳು ಬೆಳಕೇ. . ಷಡ್ಜದ ಶುದ್ದತೆಯೇ.. ಪಂಚಮದ ಆರ್ದ್ರ ಪ್ರೇಮವೇ ..ಕೈ ಹಿಡಿದು ನಡೆಸೆನ್ನನು_.

ಮಾಲತಿ ಎಸ್. ಭಟ್.